

## ಹರಕೆಕಾಯಿ ಮೈದುಂಬಿಕೊಂಡ ಮರ

ಹಂಪಿಯ ಆನೆಗೊಂದಿಯ ಬೆಟ್ಟದ ಮೇಲಿರುವ ದುರ್ಗಾದೇವಿ ದೇವಾಲಯದ ಮುಂದಿರುವ ನಾಗರ ಕಟ್ಟೆಯಲ್ಲಿ ಒಂದು ಅರಳಿ ಮರವಿದೆ. ಈ ಮರಕ್ಕೆ ನೂರಾರು ತೆಂಗಿನಕಾಯಿಗಳನ್ನು ಬಣ್ಣ ಬಣ್ಣದ ಬಟ್ಟೆಯಿಂದ ಕಟ್ಟುತ್ತಾರೆ. ಅವು ಹರಕೆಯ ಕಟ್ಟುಗಳು. ಇಲ್ಲಿ ಕಾಯಿ ಕಟ್ಟಿ ಹರಕೆ ಹೊತ್ತು ಹೋಗುವ ರೂಢಿ ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಈ ಬಗ್ಗೆ ಅಲ್ಲಿನ ಪೂಜಾರಿ ಅವರನ್ನು ವಿಚಾರಣೆ ಮಾಡಿದಾಗ 'ಇಲ್ಲಿಗೆ ಬರುವ ಭಕ್ತರು ಮರಕ್ಕೆ ಕಾಯಿ ಕಟ್ಟಿ ನಾನಾ ರೀತಿಯ ಹರಕೆಯನ್ನು ಮಾಡಿಕೊಳ್ಳುತ್ತಾರೆ. ಹಾಗೆಯೇ ಭಕ್ತರ ಸಾಕಷ್ಟು ಬೇಡಿಕೆಗಳು, ಸಮಸ್ಯೆಗಳು ಈಡೇರಿವೆ' ಎಂದರು. ಈ ದೇವಾಲಯದ ಆವರಣದಲ್ಲಿರುವ ಮಠದ ವತಿಯಿಂದ ನಿತ್ಯ ಅನ್ನ ದಾಸೋಹ ಹಾಗೂ ಒಂದು ಗೋಶಾಲೆ ನಡೆಯುತ್ತಿದೆ. ಈ ಬೆಟ್ಟದಲ್ಲಿ ವಾಲಿ ಗುಹೆಯಿದೆ.

–ಪಿ.ಹೆಚ್. ಪಾಟೀಲ್, ರಾಣೆಬೆನ್ನೂರ



## ಎತ್ತಿನಗಾಡಿಯ ಪ್ರತಿಕೃತಿ

ಶ್ರೀರಂಗಪಟ್ಟಣದಿಂದ ಪಾಂಡವಪುರ ಕಡೆ ತೆರಳುವ ಮಾರ್ಗದಲ್ಲಿ, ದರಸಗುಪ್ಪೆ ಗ್ರಾಮಕ್ಕೆ ಕೂಗಳತೆ ದೂರದಲ್ಲಿರುವ ಪೆಟ್ರೋಲ್ ಬಂಕ್ ಎದುರು ಕಟೆದು ನಿಲ್ಲಿಸಿರುವ ಎತ್ತಿನಗಾಡಿಯ (ಮರದ ಚಕ್ಕಡಿ) ಪ್ರತಿಕೃತಿ ನೋಡುಗರ ಗಮನ ಸೆಳೆಯುತ್ತದೆ. ರೈತನೋರ್ವ ಎತ್ತಿನಗಾಡಿಯ ಮೇಲೆ ಕುಳಿತು ಎತ್ತುಗಳನ್ನು ಮುನ್ನಡೆಸುವ ದೃಶ್ಯ ಆಕರ್ಷಕವಾಗಿದೆ. ದೂರದಿಂದ ನೋಡಿದರೆ ಎತ್ತಿನಗಾಡಿ ನಿಜವಾಗಿಯೂ ಬರುತ್ತಿರುವಂತೆ ಭಾಸವಾಗುತ್ತದೆ. ಹಾಲು ಬಣ್ಣದ ಹಳ್ಳಿ ಕಾರ್ ತಳಿಯ ಎತ್ತುಗಳು ಗಾಡಿಯನ್ನು ಎಳೆಯುತ್ತಿರುವಂತೆ, ತಲೆಗೆ ಹಸುರು ಟವೆಲ್ ಸುತ್ತಿರುವ ರೈತ ಗಾಡಿಯ ಮೇಲೆ ಕುಳಿತಿರುವಂತೆ ಚಿತ್ರಿಸಲಾಗಿದೆ. ತಮ್ಮ ವಾಹನಗಳಿಗೆ ಪೆಟ್ರೋಲ್, ಡೀಸೆಲ್ ಹಾಕಿಸಲು ಈ ಪೆಟ್ರೋಲ್ ಬಂಕ್‌ಗೆ ಬರುವ ಗ್ರಾಹಕರು, ಪೆಟ್ರೋಲ್ ಇಲ್ಲದೇ ಓಡುವ ಈ ಜೋಡೆತ್ತಿನ ಗಾಡಿಯ ಪ್ರತಿಕೃತಿಯ ಎದುರು ನಿಂತು ಫೋಟೊ ಕ್ಲಿಕ್ಕಿಸಿಕೊಂಡು ಖುಷಿಪಡುತ್ತಿದ್ದಾರೆ.

–ಗಣಂಗೂರು ನಂಜೇಗೌಡ, ಶ್ರೀರಂಗಪಟ್ಟಣ



## ಕೊಡಗಿನಲ್ಲಿ ಗಾಜಿನ ಸೇತುವೆ

**ಅಲ್ಲೆ ಆ ಕಡೆ ನೋಡಲಾ**
**ಅಲ್ಲೆ ಕೊಡಗರ ನಾಡಲಾ**
**ಅಲ್ಲೆ ಕೊಡಗರ ಬೀಡಲಾ**

ಇದು ಪಂಜೆಮಂಗೇಶರಾಯರು ಕೊಡಗಿನ ನಿಸರ್ಗ ಸೌಂದರ್ಯದ ಕುರಿತಂತೆ ಬರೆದ ಕವಿತೆ. ಅಲ್ಲಿನ ಸೌಂದರ್ಯವೇ ಹಾಗೆ. ಎಂಥವರನ್ನೂ ಮಂತ್ರಮುಗ್ಧರನ್ನಾಗಿಸುತ್ತದೆ. ಅಲ್ಲಿನ ಹೋಮ್ ಸ್ಟೇ ಸೌಲಭ್ಯ, ಉಪಚಾರ, ಹಚ್ಚಹಸುರಿನ ಬೆಟ್ಟಗುಡ್ಡ, ಭತ್ತದ ಬಯಲು, ಕಾಫಿ ತೋಟಗಳ ನಡುವಿನ ಪ್ರಶಾಂತತೆ ಸವಿಜೇನು ಸವಿದಂತೆ.

ಮಡಿಕೇರಿ ಬಳಿಯ ಉಡೋತ್ ಮೊಟ್ಟೆ ಗ್ರಾಮದ ಗುಡ್ಡವೊಂದರ ಮೇಲೆ ಅಲ್ಲಿನ ಕಾಫಿ ಬೆಳೆಗಾರರೊಬ್ಬರು ಲಕ್ಷಾಂತರ ರೂಪಾಯಿ ವ್ಯಯಿಸಿ ಗಾಜಿನ ಸೇತುವೆ ನಿರ್ಮಿಸಿದ್ದಾರೆ. ಈ ಸೇತುವೆ ಮೇಲೆ ನಿಂತು, ಸುತ್ತಲಿನ ಪ್ರಕೃತಿಯ ವಿಹಂಗಮ ನೋಟವನ್ನು ವೀಕ್ಷಿಸುವುದೇ ರೋಮಾಂಚನಕಾರಿ. ಮಡಿಕೇರಿಯಿಂದ ಇಲ್ಲಿಗೆ ಸುಮಾರು 10 ಕಿ.ಮೀ. ಆಗಬಹುದು.

ಕಾಫಿ ತೋಟದ ನಡುವೆ ಸುಮಾರು 80 ಅಡಿ ಕಂದಕದ ಕೆಳಗಿನಿಂದ ಕಬ್ಬಿಣದ ಪಿಲ್ಲರ್ ನಿರ್ಮಿಸಿ, ಅದರ ಮೇಲೆ 33 ಎಂ.ಎಂ. ದಪ್ಪದ ಗಾಜನ್ನು ಅಳವಡಿಸಿ ಸೇತುವೆ ನಿರ್ಮಿಸಲಾಗಿದೆ. ಸೇತುವೆ ನಿರ್ಮಾಣದ ಹಿಂದೆ ಕೇರಳದ ತಂತ್ರಜ್ಞರ ಶ್ರಮವಿದೆ. ಸುಮಾರು 33 ಮೀಟರ್ ಉದ್ದವಿರುವ ಈ ಸೇತುವೆಯ ಕೊನೆಯ ಭಾಗವನ್ನು ವೃತ್ತಾಕಾರವಾಗಿ ನಿರ್ಮಿಸಲಾಗಿದೆ. ಸುರಕ್ಷತೆಯ ದೃಷ್ಟಿಯಿಂದ ಒಮ್ಮೆ ಆರು ಮಂದಿಗೆ ಮಾತ್ರ ಸೇತುವೆ ಮೇಲೆ ಸಾಗಲು ಅವಕಾಶ ನೀಡಲಾಗಿದೆ. ಅದಕ್ಕೆಂದು ಇಂತಿಷ್ಟು ಶುಲ್ಕವನ್ನೂ ನಿಗದಿಪಡಿಸಲಾಗಿದೆ. ಇದು ಕರ್ನಾಟಕದಲ್ಲೇ ಅತಿ ಉದ್ದದ ಗಾಜಿನ ಸೇತುವೆ ಎಂಬ ಪ್ರಶಂಸೆಗೆ ಪಾತ್ರವಾಗಿದ್ದು, ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತಿದೆ.

–ಡಾ. ಕರವೀರಪ್ರಭು ಕ್ಯಾಲಕೊಂಡ, ಬಾದಾಮಿ